### ರಾಜಕಾರಣದಲ್ಲಿನ ಕಾಮಕಾಂಡ

ಹಲವು ರಾಜಕಾರಣಿಗಳು ಸಾಕ್ಷ್ಯ ಸಮೇತ ಲೈಂಗಿಕ ಹಗರಣಗಳಲ್ಲಿ ಸಿಕ್ಕಿಬಿದ್ದಿದ್ದಾರೆ. ಈ ಪಟ್ಟಿಯಲ್ಲಿ ದೊಡ್ಡ ದೊಡ್ಡ ಹೆಸರುಗಳೂ ಇವೆ. ಸುರೇಶ್ ರಾಮ್ (ಬಾಬು ಜಗಜೀವನ್ ರಾಮ್ ಪುತ್ರ), ಬಿಜೆಪಿ ನಾಯಕ ರಾಘವ್ ಜಿ., ಕಾಂಗ್ರೆಸ್ ನಾಯಕ ಅಭಿಷೇಕ್ ಮನು ಸಿಂಘ್ವಿ, ರಾಜಸ್ಥಾನದಲ್ಲಿ ಒಂದು ಬಾರಿ ಸಚಿವರಾಗಿದ್ದ ಮಹಿಪಾಲ್ ಮಾಡೆರ್ನಾ, ಧ್ರುವ ನಾರಾಯಣ ಸಿಂಗ್, ಬಿಎಸ್‌ಪಿಯ ಪುರುಷೋತ್ತಮ ನರೇಶ್ ದ್ವಿವೇದಿ, ಸಮಾಜವಾದಿ ಸಚಿವ ಗಾಯತ್ರಿ ಪ್ರಸಾದ್ ಪ್ರಜಾಪತಿ, ಉನ್ನಾವೊದ ಮಾಜಿ ಬಿಜೆಪಿ ಶಾಸಕ ಕುಲದೀಪ್ ಸಿಂಗ್ ಸೆಂಗಾರ್ ಹಾಗೂ ಇನ್ನೂ ತುಂಬಾ ಮಂದಿ.

ಕಾಂಗ್ರೆಸ್ ನೇತಾರ ಎನ್‌.ಡಿ. ತಿವಾರಿ ಅವರು ಏಕಕಾಲದಲ್ಲಿ ಮೂವರು ಮಹಿಳೆಯರೊಂದಿಗೆ ಹಾಸಿಗೆಯಲ್ಲಿ ಕಾಣಿಸಿಕೊಂಡಿದ್ದು ಸುದ್ದಿಯಾಗಿತ್ತು. ತಾನು ಯುವಕನೊಬ್ಬನ ಜೈವಿಕ ತಂದೆಯೆಂಬುದನ್ನು ಒಪ್ಪಿಕೊಳ್ಳದೆ ಅಲ್ಲಗಳೆದುಕೊಂಡೇ ಬಂದಿದ್ದರು. ಆ ನಂತರ, ತಿವಾರಿಯವರು, ಸಾಕ್ಷ್ಯಗಳ ಪ್ರಕಾರ, ಆ ಯುವಕನ ಜೈವಿಕ ತಂದೆ ಎಂಬುದು ಸಾಬೀತಾಗಿತ್ತು.

**ಆತಂಕ–ವಿಷಾದದ ಜಾಗದಲ್ಲಿ ನಿರಾಳಭಾವ ಮೂಡುವುದು ಎಂದಿಗೆ?**



ಸ್ಥಳೀಯ ರಾಜಕೀಯ ಅಧಿಕಾರದ ಶಕ್ತಿ, ಜಾತಿ, ಪಿತೃ ಪ್ರಧಾನ ದೃಷ್ಟಿಕೋನ – ಇವೆಲ್ಲಾ ಲೈಂಗಿಕ ಅಪರಾಧಗಳಿಗೆ ಶಿಕ್ಷಾಭಯವಿಲ್ಲದ ಸ್ಥಿತಿಯನ್ನು ಸೃಷ್ಟಿಸುತ್ತದೆ ಎಂಬುದು ಸ್ಪಷ್ಟ.

113 ಶಾಸಕರು ಹಾಗೂ 21 ಸಂಸತ್ ಸದಸ್ಯರ (ಒಟ್ಟು 134 ಜನ ಪ್ರತಿನಿಧಿಗಳು) ವಿರುದ್ಧ ಮಹಿಳೆ ಮೇಲೆ ನಡೆಸಿದ ಅಪರಾಧ ಕೃತ್ಯಗಳ ಪ್ರಕರಣಗಳು ದಾಖಲಾಗಿವೆ ಎಂಬುದನ್ನು 'ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್'ನ (ಎಡಿಆರ್‌ನ) 2023ರ ಆಗಸ್ಟ್ ತಿಂಗಳ ವರದಿ ತಿಳಿಸಿದೆ. 762 ಹಾಲಿ ಎಂಪಿಗಳು ಹಾಗೂ 4,001 ಹಾಲಿ ಶಾಸಕರ ಕುರಿತಾದ ವಿಶ್ಲೇಷಣೆಗಳ ನಂತರ ಹೊರ ಬಂದಿರುವ ಮಾಹಿತಿ ಇದು.

ಅತಿ ಹೆಚ್ಚಿನ ಪ್ರಕರಣಗಳಿರುವುದು ಬಿಜೆಪಿ ಮುಖಂಡರ ಮೇಲೆ, ಆ ನಂತರದ ಸ್ಥಾನ ಕಾಂಗ್ರೆಸ್‌ನದು. ಬಿಜೆಪಿಯ ಒಟ್ಟು 44 ಎಂಪಿ, ಎಂಎಲ್‌ಎಗಳ ಮೇಲೆ ಪ್ರಕರಣಗಳಿವೆ (ಬಿಜೆಪಿ ಎಂಪಿಗಳು 7). ಹಾಗೆಯೇ ಕಾಂಗ್ರೆಸ್‌ನ 25 ಮತ್ತು ಆಮ್ ಆದ್ಮಿ ಪಕ್ಷದ (ಎಎಪಿ) 13 ಹಾಲಿ ಎಂಪಿ, ಎಂಎಲ್‌ಎಗಳ ಮೇಲೂ ಪ್ರಕರಣಗಳಿವೆ.

'ನ್ಯಾಯವನ್ನು ಪಡೆದುಕೊಳ್ಳುವುದಕ್ಕಾಗಿ ಎಷ್ಟು ಬಾರಿ ತಾನೇ ಸಂತ್ರಸ್ತರು ಮಾತನಾಡಬೇಕು' – ಇದು, ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯು.ಎಫ್.ಐ.) ಮಾಜಿ ಅಧ್ಯಕ್ಷ ಬ್ರಿಜ್ ಭೂಷಣ್ ಶರಣ್ ಸಿಂಗ್ ಅವರ ಲೈಂಗಿಕ ಕಿರುಕುಳ ವಿರುದ್ಧ ಮಹಿಳಾ ಕುಸ್ತಿಪಟುಗಳ ಪ್ರತಿಭಟನೆ ಕಳೆದ ವರ್ಷ ಶುರುವಾದ ಸಂದರ್ಭದಲ್ಲಿ ಕುಸ್ತಿಪಟು ವಿನೇಶ ಫೋಗಟ್ ಅವರು 'ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆಗೆ ಬರೆದಿದ್ದ ಲೇಖನದಲ್ಲಿ ಕೇಳಿದ್ದ ಪ್ರಶ್ನೆ.

ಈಗ, 'ರಾಷ್ಟ್ರದ ಹೆಣ್ಣುಮಕ್ಕಳು ಸೋತಿದ್ದಾರೆ. ಬ್ರಿಜ್ ಭೂಷಣ್ ಸಿಂಗ್ ಗೆದ್ದಿದ್ದಾರೆ', ಎಂದು ತಮ್ಮ ಎಕ್ಸ್ ಖಾತೆಯಲ್ಲಿ ಒಲಿಂಪಿಕ್ ಪದಕ ವಿಜೇತೆ ಕುಸ್ತಿ ಪಟು ಸಾಕ್ಷಿ ಮಲಿಕ್ ಇತ್ತೀಚೆಗೆ ಬರೆದುಕೊಂಡಿದ್ದಾರೆ.

ಈ ಬಾರಿಯ ಲೋಕಸಭಾ ಚುನಾವಣೆಗೆ ಬ್ರಿಜ್ ಭೂಷಣ್ ಶರಣ್ ಸಿಂಗ್‌ರ ಪುತ್ರನಿಗೆ ಉತ್ತರ ಪ್ರದೇಶದ ಕೈಸರ್ ಗಂಜ್ ಕ್ಷೇತ್ರದಲ್ಲಿ ಬಿಜೆಪಿ ಟಿಕೆಟ್ ನೀಡಿದೆ. ಲೋಕಸಭೆಗೆ ಆರು ಬಾರಿ ಆಯ್ಕೆಯಾಗಿರುವ ಬ್ರಿಜ್ ಭೂಷಣ್ ಸಿಂಗ್, ಗಂಭೀರವಾದ ಲೈಂಗಿಕ ಕಿರುಕುಳ ಆರೋಪಗಳನ್ನು ಎದುರಿಸುತ್ತಿರುವುದರಿಂದ ಈ ಬಾರಿ ಅವರನ್ನು ಬಿಜೆಪಿ ಕಣಕ್ಕಿಳಿಸಿಲ್ಲ. ಆದರೆ ಅವರ ಪುತ್ರನಿಗೆ ಬಿಜೆಪಿ ಟಿಕೆಟ್ ನೀಡಲಾಗಿದೆ. ಪೋಷಕರ ತಪ್ಪುಗಳನ್ನು ಮಕ್ಕಳು ಹೊರಬೇಕಿಲ್ಲ ಎಂಬುದು ನಿಜ. ಆದರೆ ಪುತ್ರನಿಗೆ ಟಿಕೆಟ್ ಸಿಕ್ಕ ಸಂಭ್ರಮವನ್ನು ಭಾರಿ ಬಲ ಪ್ರದರ್ಶನದೊಂದಿಗೆ ಅಪ್ಪ ಆಚರಿಸಿದ್ದಾರೆ. ಹೀಗಾಗಿ ಕುಸ್ತಿ ಚಾಂಪಿಯನ್ ಸಾಕ್ಷಿ ಮಲಿಕ್ ಮಾತುಗಳು ಮುಖ್ಯವಾಗುತ್ತವೆ. ಏಕೆಂದರೆ ಆ ಮಾತುಗಳು, ಚುನಾವಣಾ ಲೆಕ್ಕಾಚಾರಗಳಿಗಾಗಿ ಮಹಿಳೆಯ ಘನತೆಗೆ ಸಂಬಂಧಿಸಿದ ವಿಚಾರಗಳನ್ನೂ ಪಕ್ಕಕ್ಕೆ ಸರಿಸಿಬಿಡುವ ರಾಜಕೀಯ ಸಂಸ್ಕೃತಿಯನ್ನು ಪ್ರಶ್ನಿಸುವಂತಹದ್ದಾಗಿದೆ. ಮಹಿಳಾ ನೇತೃತ್ವದ ಅಭಿವೃದ್ಧಿ, ಕುಟುಂಬ ರಾಜಕಾರಣಕ್ಕೆ